

# ನಮಾಮಿ ನಾಮಿಕ್!

## ಹಿಮದ ನೆರಳಲ್ಲಿ ಅರಳಿದ ಬ್ರಹ್ಮಕಮಲ



ಅಪರೂಪದ ಬ್ರಹ್ಮ ಕಮಲ ಪುಷ್ಪ

ಹಿಮಾಲಯದ ಕನಸು ಕಾಣುವವರು ಸ್ವಚ್ಛ ಹಿಮಚಾದರ ಹೊದ್ದ ಪರ್ವತಗಳನ್ನೇ ಊಹಿಸಿ ರೋಮಾಂಚಿತರಾಗುತ್ತಾರೆ. ಗೆಳೆಯರು ಹಿಮಗಾಲವನ್ನು ತಪ್ಪಿಸಿ ನಾಮಿಕ್‌ಗೆ ಹೋಗೋಣವೆಂದಾಗ ತುಸು ಗೊಂದಲವಾಗಿದ್ದು ಹೌದು. ಅದು ನಡು ಮಳೆಗಾಲ. ಉತ್ತರಾಖಂಡದ ಗೆಳತಿಯೊಬ್ಬಳು ಮಳೆಗಾಲದ ಅಲ್ಲಿನ ಭೂಕುಸಿತಗಳನ್ನು ವರ್ಣಿಸಿ, ಒಂದೆರಡು ವಿಡಿಯೊಗಳನ್ನೂ ತೋರಿಸಿ ಬಾಯಿ ಒಣಗುವಂತೆ ಮಾಡಿದ್ದಳು. ಮತ್ತು ಅಲ್ಲಿಗೆ ಹೋಗುವ ಅರೆ ಮನಸ್ಸು ಗಟ್ಟಿಗೊಳಿಸಿದ್ದಳು! ಹಿಮವಿಲ್ಲದಿದ್ದರೇನಂತೆ, ಒಂದಿಡೀ ಬೆಟ್ಟದ ತುಂಡೇ 'ಅಂಜಿಕಿನ್ಯಾತಕಯ್ಯ' ಎಂಬಂತೆ ಕುಸಿದು ದುಂಡಾಗುವ ದೃಶ್ಯ ಸಾಮಾನ್ಯದ್ದಲ್ಲ. ಹಾಗೆ ನೋಡಿದರೆ ಅದು ವಿಘ್ನಾಸ್ವಾದನೆಯೋ ಅಥವಾ ಯಾರೂ ಏನೂ ಮಾಡಲಾಗದ ಸೃಷ್ಟಿಯ ಭೀಕರತೆಯೆದುರು ನಮ್ಮನ್ನು ನಾವೇ ಮರೆತು ನಿಲ್ಲಬಹುದಾದ ಬೆರಗೋ ತಿಳಿಯದಂತಾಗಿತ್ತು. ಹೇಗೂ ಇರಲಿ ಎಂದು ಹೊರಟಿದ್ದಾಯಿತು.

ದೆಹಲಿಯಿಂದ ಹಲ್ದ್‌ವಾನಿ, ಆಲ್ಮೊಡಾ ಮಾರ್ಗವಾಗಿ ಸರಯೂ ಗೋಮತಿ ನದಿಗಳು ಬಳಸಿ ಹರಿಯುವ ಕುಮಾಂವ್ ಪ್ರಾಂತ್ಯದ ಬಾಗೇಶ್ವರ್ ತಲುಪಿದೆವು. ಘರ್ ವಾಲ್ ಮತ್ತು ಕುಮಾಂವ್ ಎಂದು ಉತ್ತರಾಖಂಡವನ್ನು ಆಡಳಿತದ ಅನುಕೂಲಕ್ಕೆ ವಿಂಗಡಿಸಲಾಗಿದೆ. ಕತ್ಯೂರಿ ಮತ್ತು ಚಾಂದ್ ಅರಸರು ಆಳುತ್ತಿದ್ದ ಕೂರ್ಮಾಂಚಲ್, 'ಕುಮಾಂವ್' ಆಗಿದ್ದು ಬ್ರಿಟಿಷರಿಂದ. ಅಲ್ಲಿ ಧೂಪ್ಕೆ ಎಂಬ ತಂಬುಳಿಯ ಅನ್ನವನ್ನು ತಿನ್ನುತ್ತಾ ಪಕ್ಕ ತಿರುಗಿದರೆ ಜರಿದುಬಿದ್ದ ಬೆಟ್ಟ! ನಾಲ್ಕಾರು ಕಲ್ಲುಗಳು ಸರ ಸರ ಎಂದಂತೆ ಭಾಸ. ಅದು ಅಲ್ಲಿನ ಶ್ರೀಸಾಮಾನ್ಯನಿಗೆ ಅತಿ ಸಾಮಾನ್ಯ ಘಟನೆ. ಯಾರೂ ಕ್ಯಾರೆ ಎನ್ನದೆ ಅವರ ಕಾಯಕದಲ್ಲಿ ಮಗ್ನರಾಗಿ, ನನಗೆ 'ಅಯ್ಯೋ ಪುಕ್ಕಲೇ' ಎಂದು ಛೇಡಿಸಿದಂತಾಯಿತು.

ಬಾಗೇಶ್ವರ್‌ನಿಂದ ಅರವತ್ತು ಚಿಲ್ಲರೆ ಕಿ.ಮೀ.ಗಳಿಗೆ ನಾಮಿಕ್ ಗ್ಲೇಸಿಯರ್ ತಲುಪಬಹುದು. ಪಕ್ಕಾ ರಸ್ತೆ ಎಂದೆಲ್ಲಾ ಕನಸೂ ಕಾಣುವಂತಿಲ್ಲದ ಬಾಗೇಶ್ವರ್ ಊರನ್ನು ದಾಟಿದರೆ ಕಲ್ಗಚ್ಚಿನ ಹಾದಿಗಳು ಜೊತೆಗೂಡಿ ಅಂತೂ ಅದೃಷ್ಟವನ್ನು ಗಟ್ಟಿ ನಂಬುವ ನಮ್ಮನ್ನು ಗೊಗಿನಾ ಎಂಬಲ್ಲಿಗೆ ಮುಟ್ಟಿಸುತ್ತವೆ. ಮುದ್ದು ಮಗುವಿನ ಮುಖಭಾವದಂತೆ ಕ್ಷಣಕ್ಕೊಮ್ಮೆ ಪಥ ಬದಲಿಸುವ ಪಂಚಭೂತಗಳು ದಾರಿಹೋಕರನ್ನು ಅಚ್ಚರಿಗೆ